ವಲಯದಲ್ಲಿ ಬರುತ್ತವೆ. ಸದರಿ ಜಮೀನುಗಳನ್ನು ಕೃಷಿಯೇತರ ವಲಯಕ್ಕೆ ಮಾರ್ಪಡಿಸಲು ಸರ್ಕಾರಕ್ಕೆ ಪ್ರಸ್ತಾವವನ್ನು ಸಲ್ಲಿಸಲಾಗಿರುತ್ತದೆ.

ಊ) ಸಂಘವು ವಿವಿಧ ಸಹಕಾರ ಬ್ಯಾಂಕುಗಳಲ್ಲಿ ಹೊಂದಿರುವ ಉಳಿತಾಯ ಖಾತೆಗಳಲ್ಲಿ ಒಟ್ಟು ರೂ. 8,12,01,445/–ಗಳು ಮತ್ತು ನಿಶ್ಚಿತ ಠೇವಣಿಗಳಲ್ಲಿ ರೂ. 53,69,43,921/–ಗಳು ಇರುತ್ತವೆ.

ಸಂಘವು ಜಮೀನನ್ನು ಅಭಿವೃದ್ಧಿಪಡಿಸಲು ಮೆ॥ ಎಂ.ಸಿ.ಎನ್. ಡೆವಲಪರ್ಸ್, ಕೊಡಿಗೇಹಳ್ಳಿ, ಸಹಕಾರ ನಗರ ಬೆಂಗಳೂರು ಇವರಿಗೆ ವಹಿಸಿರುತ್ತದೆ.

1087 ಶ್ರೀ ಎ. ಮಂಜು ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಸಹಕಾರ ನಗರ, ಸಹಕಾರ ಸಂಘ ಬಡಾವಣೆಯಲ್ಲಿ ಉದ್ಯಾನವನ ಮತ್ತು ನಾಗರೀಕ ಸೌಲಭ್ಯಗಳ ಜಾಗವನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ವಶಕ್ಕೆ ತೆಗೆದುಕೊಂಡಿರುವ ನಿವೇಶನಗಳ ಸಂಖ್ಯೆ ಎಷ್ಟು;

ಆ) ಮಿನಿಷ್ಟ್ರಿ ಆಫ್ ಕಮ್ಯೂನಿಕೇಷನ್ ಸಹಕಾರ ಗೃಹ ನಿರ್ಮಾಣ ಸಂಘವು ನಿಯಮ ಬಾಹಿರವಾಗಿ ಮಾರಾಟ ಮಾಡಿರುವ (ಉದ್ಯಾನವನ ಮತ್ತು ಸಿ.ಎ. ಜಾಗ) ನಿವೇಶನಗಳ ಸಂಖ್ಯೆ ಎಷ್ಟು; ಯಾರು ಯಾರಿಗೆ ಮಾರಾಟ ಮಾಡಲಾಗಿದೆ)? (ವಿವರ ನೀಡುವುದು)

ಇ) ಇಂತಹ ನಿವೇಶನಗಳಲ್ಲಿ ಈಗಾಗಲೇ ನಿಯಮ ಬಾಹಿರವಾಗಿ ಕಟ್ಟಡ ಕಟ್ಟಿರುವುದು ಹಾಗೂ ಕಟ್ಟುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮವೇನು?

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ (ಸಹಕಾರ ಸಚಿವರು)

ಅ) ಸಂಘವು ಬೆಂಗಳೂರು ಸಹಕಾರ ನಗರ ಬಡಾವಣೆಯಲ್ಲಿ ಬಡಾವಣೆಯ ಒಟ್ಟು ಪ್ರದೇಶದ ಶೇಕಡಾ 15ರಷ್ಟು ಅಂದರೆ 1,21,283.28 ಚದರ ಮೀಟರ್ ಜಾಗವನ್ನು ಉದ್ಯಾನವನ ಮತ್ತು ನಾಗರೀಕ ಸೌಲಭ್ಯಗಳ ಸಲುವಾಗಿ ಬಿ.ಡಿ.ಎ. ಪ್ರಾಧಿಕಾರಕ್ಕೆ ವಿವಿಧ ದಿನಾಂಕಗಳಲ್ಲಿ ರಿಲಿಂಗ್ ಕ್ವಿಷ್ ಡೀಡ್ ಮೂಲಕ ಹಸ್ತಾಂತರಿಸಿರುತ್ತದೆ.

ಆ) ಸಂಘವು ಸಹಕಾರ ನಗರ ಬಡಾವಣೆಯಲ್ಲಿ ನಿಯಮ ಬಾಹಿರವಾಗಿ ಉದ್ಯಾನವನ ಮತ್ತು ಸಿ.ಎ. ಜಾಗಗಳಲ್ಲಿ ನಿವೇಶನಗಳನ್ನು ರಚನೆ ಮಾಡಿರುವುದಿಲ್ಲ. ಅನುಮೋದಿತ ನಕ್ಷೆಯಲ್ಲಿನ ಸಿ.ಎ. ಮತ್ತು ಉದ್ಯಾನವನ ಜಾಗವನ್ನು ಬಡಾವಣೆಯಲ್ಲಿಯೇ ಬೇರೆಡೆಗೆ ಸ್ಥಳಾಂತರಿಸಿದ್ದು, ಸದರಿ ಜಾಗದಲ್ಲಿ ಒಟ್ಟು 55 ನಿವೇಶನಗಳನ್ನು ರಚನೆ ಮಾಡಿ ಸಂಘದ ಸದಸ್ಯರಿಗೆ ಹಂಚಿಕೆ

ಮಾಡಿರುತ್ತದೆ. ಈ ರೀತಿಯಾಗಿ ಸಿ.ಎ. ಜಾಗವನ್ನು ಸ್ಥಳಾಂತರಿಸಿ ಮಾರ್ಪಾಡಿತ ನಕ್ಷೆಯನ್ನು ಈಗಾಗಲೇ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಅನುಮೋದನೆಗಾಗಿ ಸಲ್ಲಿಸಲಾಗಿದ್ದು, ಪ್ರಾಧಿಕಾರವು ದಿನಾಂಕ 22–12–2006ರಂದು ನಡೆದ ಸಭೆಯಲ್ಲಿ ಅದರ ಠರಾವು ಸಂಖ್ಯೆ: 178/06ರಲ್ಲಿ ಮಾರ್ಪಾಡಿತ ನಕ್ಷೆಯನ್ನು ಅನುಮೋದಿಸಲು ಒಪ್ಪಿರುತ್ತದೆ. ಈ ಮಧ್ಯೆ ಈ ಪ್ರಕರಣದ ಬಗ್ಗೆ ಉಚ್ಚ ನ್ಯಾಯಾಲಯದಲ್ಲಿ ಸಿ.ಸಿ.ಸಿ. ಸಂಖ್ಯೆ 458/07 ದಾಖಲಾಗಿ ನೀಲಿ ನಕ್ಷೆ ಅನುಮೋದನೆಗೆ ಆಡಚಣೆಯಾಗಿತ್ತು. ತದನಂತರ ಈ ಪ್ರಕರಣವು ಇತ್ಯರ್ಥವಾಗಿ ಸಂಘದ ಪರ ತೀರ್ಪು ಬಂದಿರುತ್ತದೆ. ಆದಾಗ್ಯೂ ಪುನಃ ಡಬ್ಲ್ಯೂಪಿ ಸಂಖ್ಯೆ: 18522/2007 ದಾಖಲಾಗಿ ಇದೇ ವಿಚಾರವನ್ನು ಪುನರಾವರ್ತಿಸಿರುವುದರಿಂದ ಬಿ.ಡಿ.ಎ. ಪ್ರಾಧಿಕಾರವು ನೀಲಿ ನಕ್ಷೆ ಅನುಮೋದಿಸಲು ಆಡಚಣೆಯಾಗಿರುತ್ತದೆ. ಹಾಲಿ ಈ ಪ್ರಕರಣವು ನ್ಯಾಯಾಲಯದಲ್ಲಿ ಇತ್ಯರ್ಥಕ್ಕೆ ಬಾಕಿ ಇರುತ್ತದೆ.

ಇ,ಈ) ಸಂಘವು ಈ ರೀತಿಯಾಗಿ ರಚಿಸಿರುವ ನಿವೇಶನಗಳಿಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಖಾತೆಗಳನ್ನು ಮಾಡಿಕೊಟ್ಟು ಕಂದಾಯವನ್ನು ಸಹ ಪ್ರತಿ ವರ್ಷ ಸಂಗ್ರಹಿಸುತ್ತಿದೆ. ಹಾಗೂ ಮನೆ ಕಟ್ಟಲು ನಕ್ಷೆಯನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಅನುಮೋದನೆ ಪಡೆದು ಸಂಘದ ಸದಸ್ಯರು ಮನೆಗಳನ್ನು ಕಟ್ಟುತ್ತಿರುತ್ತಾರೆ. ಇವು ನಿಯಮ ಬಾಹಿರವಾದ ಕಟ್ಟಡ ಗಳಾಗಿರುವುದಿಲ್ಲ.

1126 ಶ್ರೀ ಮಂಜು ಎ. ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಳೆದ ವರ್ಷದಿಂದ ಈವರೆಗೂ ಚೀನಾ ಪ್ರವಾಸ ಕೈಗೊಂಡ ರೈತರ ಸಂಖ್ಯೆ ಎಷ್ಟು; (ಜಿಲ್ಲಾವಾರು, ತಾಲ್ಲೂಕುವಾರು, ಗ್ರಾಮವಾರು ರೈತರ ಹೆಸರಿನೊಂದಿಗೆ ವಿವರ ನೀಡುವುದು);

ಆ) ಇದರಿಂದ ರೈತರಿಗೆ ಅನುಕೂಲವಾಗಿದೆಯೇ?

ಶ್ರೀ ಎಸ್.ಎ. ರವೀಂದ್ರನಾಥ್ (ಕೃಷಿ ಸಚಿವರು)

ಅ) ರಾಜ್ಯದಲ್ಲಿ ಕಳೆದ ವರ್ಷದಿಂದ ಈವರೆಗೂ 633 ರೈತರು ಚೀನಾ ಪ್ರವಾಸ ಕೈಗೊಂಡಿರುತ್ತಾರೆ. (ವಿವರವನ್ನು ಅನುಬಂಧ–1ರಲ್ಲಿ ಲಗತ್ತಿಸಿದೆ)

ಆ) ರೈತರಿಗೆ ಚೀನಾ ದೇಶದಲ್ಲಿನ ಕೃಷಿ ತಾಂತ್ರಿಕತೆಗಳ ಬಗ್ಗೆ ಅರಿವು ಮೂಡಿಸಲಾಗಿರುತ್ತದೆ. ಸದರಿ ತಾಂತ್ರಿಕತೆಗಳನ್ನು ತಮ್ಮ ಕ್ಷೇತ್ರಗಳಲ್ಲಿ ಅಳವಡಿಸಿ ಉತ್ಪಾದನೆಯನ್ನು ಹೆಚ್ಚಿಸಲು ಸಾಧ್ಯವಿರುವುದರಿಂದ ರೈತರಿಗೆ ಈ ಪ್ರವಾಸದಿಂದ ಅನುಕೂಲವಾಗಿರುತ್ತದೆ.